ನನ್ನ ಓದು

# ವ್ಯಕ್ತಿ ಕಥನದೊಳಗೆ ದೇಶದ ಸಂಕಥನ



**ಕುಮಾರಚಲ್ಯ**

ಮನೋರಂಜನ್ ಬ್ಯಾಪಾರಿ ಹೆಸರಾಂತ ಬಂಗಾಳಿ ಲೇಖಕ. ಅವರು ಜನಿಸಿದ್ದು ಪೂರ್ವ ಪಾಕಿಸ್ತಾನದ (ಇಂದಿನ ಬಾಂಗ್ಲಾದೇಶ) ಬರಿಸಾಲ್ ಜಿಲ್ಲೆಯ ಪಿರಿಚ್‌ಪುರ್ ಹತ್ತಿರದ ತುರುಕ್ ಬಾಲಿ ಎಂಬಲ್ಲಿ; ಕಡುಬಡತನದ ದಲಿತ ಕುಟುಂಬವೊಂದರಲ್ಲಿ. ಅದು ಕೋಮುದ್ವೇಷ ಆವರಿಸಿಕೊಂಡು, ಭಾರತವನ್ನು ಅಲುಗಾಡಿಸಿದ ದೇಶ ವಿಭಜನೆಯ ಸಂದರ್ಭ. ಅವರು ಕ್ರಿಯಾಶೀಲ ವ್ಯಕ್ತಿತ್ವದ ಸಾಮಾಜಿಕ ಹೋರಾಟಗಾರ; ಸಾಮಾಜಿಕ ಸಮಾನತೆಯನ್ನು ತೀವ್ರವಾಗಿ ಪ್ರತಿಪಾದಿಸಬಲ್ಲ ರಾಜಕಾರಣಿ; ಬಂಗಾಳದ ಹಾಲಿ ಶಾಸಕ. ಪಶ್ಚಿಮ ಬಂಗಾಳಿ ದಲಿತ ಸಾಹಿತ್ಯ ವಲಯದಲ್ಲಿ ಹೊಸ ಸಂಚಲನವನ್ನು ತಂದ ಆರಂಭದ ಲೇಖಕರಲ್ಲಿ ಒಬ್ಬರು. 'ಶಾಲೆಗೆ ಹೋಗಿ ಓದು-ಬರಹ ಕಲಿಯಲಾಗದಿದ್ದರೂ ಜೈಲಿಗೆ ಹೋಗುವ ಅವಕಾಶಗಳು ಹೇರಳವಾಗಿ ಸಿಕ್ಕಿದವು. ಯಾವ ಕೆಲಸಕ್ಕೂ ಬಾರದ ಕಸ ಎಂದು ನನ್ನನ್ನು ಗುಡಿಸಿ ಮೂಲೆಗುಂಪು ಮಾಡಿದ್ದರು. ಆದರೆ, ಈಗ ವೇದಿಕೆಗೆ ಕರೆದು, ಹಾರ ಹಾಕಿ ಸನ್ಮಾನ ಮಾಡುವಾಗ ಈ ಜೀವನ ಖಂಡಿತವಾಗಿಯೂ ನಿಷ್ಪ್ರಯೋಜಕ ಆಗಲಿಲ್ಲ ಎಂಬ ಭಾವನೆ ಮೂಡಿಬರುತ್ತದೆ. ಯಾವುದೇ ಶಾಲೆಯ ಹೊಸ್ತಿಲನ್ನೂ ನಾನು ದಾಟಲಿಲ್ಲ. ಜಾಧವಪುರ ವಿಶ್ವವಿದ್ಯಾಲಯದ ಎದುರು ಸೈಕಲ್ ರಿಕ್ಷಾ ತುಳಿಯುತ್ತಿದ್ದೆ. ಆದರೆ, ಈಗ ಅದೇ ವಿಶ್ವವಿದ್ಯಾಲಯದ ತೌಲನಿಕ ಸಾಹಿತ್ಯ ಅಧ್ಯಯನದ ವಿಭಾಗದಲ್ಲಿ ನನ್ನ ಜೀವನ ಹಾಗೂ ಸಾಹಿತ್ಯವನ್ನು ಅಧ್ಯಯನ ಮಾಡುತ್ತಾರೆ. ಜೀವನ ಸಾರ್ಥಕ ಆಯ್ತು ಎನಿಸುತ್ತದೆ' ಎನ್ನುವ ಮನೋರಂಜನ್‌ರ ಮಾತೇ ಅವರು ನಡೆದುಬಂದ ಹಾದಿಯನ್ನು ಸೂಚಿಸುವಂತಿದೆ.

'ಇತಿಬ್ರಿತ್ತೆ ಚಾಂಡಾಲ ಜಿಬಾನ್' ಮನೋರಂಜನ್ ಬ್ಯಾಪಾರಿ ಅವರ ಆತ್ಮಕಥನ; ದೇಶವೊಂದರ ಕರಾಳಚರಿತ್ರೆಯೂ ಹೌದು. ಬೆಂಗಾಲಿ ಮೂಲದ ಇದನ್ನು ಸಿಪ್ರಾ ಮುಖರ್ಜಿ ಇಂಗ್ಲಿಷಿಗೆ ಅನುವಾದಿಸಿದ್ದಾರೆ (Interrogating My Chandal Life: An Autobiography of a Dalit). ಈಗ ಡಾ. ಎಚ್.ಎಸ್. ನಾಗಭೂಷಣ ಅವರ ಮೂಲಕ 'ಚಾಂಡಾಳನೊಬ್ಬನ ಆತ್ಮವಿಮರ್ಶೆ' ಹೆಸರಿನಲ್ಲಿ ಕನ್ನಡಕ್ಕೆ ಬಂದಿದೆ.

ಈ ಕೃತಿ ಒಬ್ಬ ವ್ಯಕ್ತಿಯ ವೃತ್ತಾಂತವಾಗಿರದೆ, ಅಂದಿನ ಭಾರತದ ಸಾಮಾಜಿಕ ಇತಿಹಾಸದ ದಾಖಲಾತಿಯಾಗಿದೆ. ಒಂದು ದಲಿತ ಸಮುದಾಯ ಅನ್ನ ಹಾಗೂ ಅಸ್ತಿತ್ವಕ್ಕಾಗಿ ನಡೆಸುವ ನಿರಂತರ ಹೋರಾಟದ ಕಥೆಯಿದು. ಇದನ್ನು ಸಾಂಸ್ಕೃತಿಕ ಪಠ್ಯವನ್ನಾಗಿ ಪರಿಭಾವಿಸಿದರೆ, ಪ್ರಸ್ತುತ ದೇಶದೊಳಗೆ ಸಂಭವಿಸುತ್ತಿರುವ ಅಸಮಾನತೆ, ಕ್ರೌರ್ಯದ